ಅಮ್ಮನ ಫೋನ್, 'ಮೊದಲೇ ನಿಮ್ಮತ್ತೆ ನಿಮ್ಮ ಮದುವೆಗೆ ಒಪ್ಪಿಕೊಂಡಿದ್ದೇ ಹೆಚ್ಚು. ಅಂಥದ್ದರಲ್ಲಿ ನೀನು ಹಾಗೆ ಮಾಡಬಹುದೆ? ಬಂದವರಿಗೆ ಒಂದು ಕಪ್ ಚಹಾ ಮಾಡಿಕೊಟ್ಟು, ಒಂದೊಂದು ಬ್ಲೌಸ್ ಪೀಸ್ ಕೊಟ್ಟು ಕಳಿಸಿದ್ದರೆ ಕಳೆದುಕೊಳ್ಳುವಂಥದ್ದೇನಿರುತ್ತಿತ್ತು? ನಿಮ್ಮತ್ತೆ ನಿನ್ನೆನೇ ಕಾಲ್ ಮಾಡಿ ನನ್ನ ಜನ್ಮ ಜಾಲಾಡಿಬಿಟ್ಟರು. ಹೆತ್ತ ಒಡಲಿಗೆ ಹೇಗಾಗಬೇಡ? ಅಪ್ಪ ಬೆಳಗ್ಗೆ ಮನೆಯಿಂದ ಹೋದವರು ಊಟಕ್ಕೂ ಬಂದಿಲ್ಲ. ಫೋನನ್ನೂ ರಿಸೀವ್ ಮಾಡುತ್ತಿಲ್ಲ.' ಇತ್ತಕಡೆಯಿಂದ ಉತ್ತರವನ್ನೂ ನಿರೀಕ್ಷಿಸದೆ, ಎಲ್ಲವೂ ಮುಗಿದೇ ಹೋಯಿತು ಎನ್ನುವಂತೆ ಬಿಕ್ಕಿಬಿಕ್ಕಿ ಅಳುತ್ತ ಫೋನ್ ಇಟ್ಟುಬಿಟ್ಟಿದ್ದರು. ಹರಿದ್ವರ್ಣಾ ಎರಡೂ ಕೈಗಳನ್ನು ಎದೆಗೆ ಕಟ್ಟಿಕೊಂಡು ಕನ್ನಡಿಯಲ್ಲಿ ತನ್ನನ್ನು ತಾನೇ ನೋಡಿಕೊಳ್ಳುತ್ತ ನಿಂತಳು.

ಇದ್ದಕ್ಕಿದ್ದ ಹಾಗೆ ಮಾಡಬೇಕಾಗಿದ್ದ ಕೆಲಸದ ನೆನಪಾಯಿತು. ಏನೋ ಒಂಚೂರು ಹೊಟ್ಟೆಗೆ ತುಂಬಿಸಿಕೊಂಡವಳೇ ರೂಮಿಗೆ ಬಂದಳು. ಖಾಲೀ ಕ್ಯಾನ್ವಾಸಿನ ಮುಂದೆ ಬರೊಬ್ಬರಿ ಮೂರು ತಾಸು ಕುಳಿತಳು. ಸಂಜೆ ಐದಾದರೂ ಅವಳೊಳಗಿನದೇನೂ ಮಿಸುಕಾಡಿ ರೇಖೆಯೊಳಗೆ ಅವಿತುಕೊಳ್ಳಲೇ ಇಲ್ಲ. ಆರುಗಂಟೆಯ ತನಕ ನೋಡಿ, ಸಂಪಾದಕರಿಗೆ ಒಂದು ಮೆಸೇಜ್ ಮಾಡಿಬಿಟ್ಟರಾಯಿತು, ಮಹಿಳಾದಿನಕ್ಕೆ ತನಗೆ ಇಲ್ಲಸ್ಟ್ರೇಷನ್ ಮಾಡಿಕೊಡಲು ಆಗುತ್ತಿಲ್ಲ ಕ್ಷಮಿಸಿ ಎಂದು. ಒಂದು ಬದ್ಧತೆಯಿಲ್ಲದವಳು ಎಂದು ನಿರ್ಲಕ್ಷಿಸಬಹುದು ಇಲ್ಲಾ ಆರ್ಟಿಸ್ಟ್ ಮೂಡ್ ಎಂದೂ ಅರ್ಥ ಮಾಡಿಕೊಳ್ಳಬಹುದು. ಎರಡರಲ್ಲಿ ಒಂದು ಆಗೇಆಗುತ್ತೆ. ಅದಕ್ಕಿಂತ ಹೆಚ್ಚಿನದೇನು ಆಗುವುದಿದೆ? ಅಂದುಕೊಂಡಂತೆ ಹರಿದ್ವರ್ಣಾ ಸಂಪಾದಕರಿಗೆ ಮೆಸೇಜ್ ಮಾಡಿದಳು. ಪರವಾಗಿಲ್ಲ, ಯಾವುದಾದರೂ ನಿಮ್ಮ ಹಳೆಯ ಇಲ್ಲಸ್ಟ್ರೇಷನ್ ಬಳಸಿಕೊಳ್ಳಲಾಗುವುದು ಎಂಬ ಮೆಸೇಜ್ ಆ ಕಡೆಯಿಂದ ತಕ್ಷಣವೇ ಬಂದಿತು. ಹೀಗೆ ಜಗತ್ತಿನಲ್ಲಿ ಅರ್ಥ ಮಾಡಿಕೊಳ್ಳುವವರ ಸಂತತಿ ಹೆಚ್ಚಲಿ ಎಂದು ಸ್ನಾನ ಮಾಡಿ ತಿಂಡಿ ತಿಂದು ಬೀನ್ ಬ್ಯಾಗಿನ ಮೇಲೆ ಒರಗಿಕೊಂಡಳು.

'ಹಾಯಾಗಿ ಮಲಗಿರು ನೀನು ರಾಣಿಯ ಹಾಗೆ' ಗಂಡನ ಮೆಸೇಜ್ ಮಿನುಗಿತು. ಮುದ್ದು ಕಳಿಸಿ ವಾಪಸು ಮಲಗಿದಳು.

ಎಡಕತ್ತಿನಿಂದ ಶುರುವಾಗಿ ಭುಜ ಮತ್ತು ಎದೆಯ ಭಾಗವನ್ನು ಆವರಿಸಿಕೊಂಡಿದ್ದ ನೋವು ನಿಧಾನಕ್ಕೆ ಇಳಿಯಹತ್ತಿತು. ಕಾಲೇಜು ಗೆಳತಿ ಅನುಪ್ರಿಯಾಳ ಮೆಸೇಜ್, 'ನೀನು ಕಲಾವಿದೆ. ಎಲ್ಲವನ್ನೂ ಎಲ್ಲರನ್ನೂ ಸಮಾನವಾಗಿ ಸಮಚಿತ್ತದಿಂದ ಕಾಣುವ ನಿನ್ನ

